ನೋಟೀಸ್.

ತಾರೀಖು 12ನೇ ನವೆಂಬರ್ 1896ನೇ ಇಸವಿ, ಬೆಂಗಳೂರು.

ಸದರ್ಹ ಮೆರಾಟಾ ರೈಲ್ವೆ ಗೂಡ್‌ಷಡ್ ಬಡಾವಣಿ ಬಗ್ಗೆ ತೆಗೆದುಕೊಂಡು ಯಿರುವ ಇದರಡಿ ಕಂಡಿರುವಂಥಾ ಕಟ್ಟಡ ಮತ್ತು ಖಾಲಿ ಜಮೀನ್‌ಗಳಿಗೆ ಕರಾವ್ ಗ ಫೈಸಲಾಗಿ ಯಿರುವ ಹಣವನ್ನು ಚಾಲ್ತಿ ಇಸವಿ ನವೆಂಬರ್ 30ನೇ ತಾರೀಖು ಲಾಗಾಯತು ಸ್ವಂತ ಕರ್ತರಿಗೆ ಪಾವತಿ ಮಾಡಲ್ಪಡುತ್ತೆ. ಈ ಕಂರ್ಪೆನ್ಸೇಷ್ಣ ಮೊಬಲಗಿಗಾಗಲೇ ಅಥವಾ ಆ ಪೈಕಿ ಯಾವ ಹಿಸ್ಸೆಗಾಗಲೇ ನ್ಯಾಯವಾದ ಹಕ್ಕು ಯಿರುವದಾಗಿ ಎಣಿಸುವ ಸಮಸ್ತರೂ ಈ ನವೆಂಬರ್ ತಿಂಗಳು 30ನೇ ತಾರೀಖು ವಳಗಾಗಿ ಸ್ವಂತವಾಗಿ ಆಗಲೀ ಅಧಿಕಾರ ಪಡೆದ ಮುತಾಲೀಕರ ಮೂಲಕವಾಗಿ ಆಗಲೀ ಈ ಕೆಳಗೆ ರುಜು ಮಾಡಿರುವರ ಅಥವಾ ಅವರ ಅಸಿಸ್ಟೆಂಟರ ರೂಬರೂ ತಮ್ಮ ತಮ್ಮ ಹಕ್ಕುಗಳನ್ನು ನಮೂದಿಸಿ ಅರ್ಜಿಗಳನ್ನು ಕೊಡಬೇಕು. ಮೇಲ್ಕಂಡ ವಾಯಿದೆ ತರುವಾಯು ಕಂರ್ಪೆನ್ಸೇಷ್ಣ ವಿಚಾರದಲ್ಲಿ ಯಾವ ವಿಧವಾದ ಹಕ್ಕೂ ಅಂಗೀಕರಿಸುವದಿಲ್ಲಾ, ತಿಳಿಯುವದು.

ಸದರ್ಹ ಮೆರಾಟಾ ರೈಲ್ವೆ ಗೂಡ್‌ಷಡ್ ಗೋಸ್ಕರ ಬೆಂಗಳೂರು ಕಸಬಾ ಗೌಡನ ಪೇಟೆಯಲ್ಲಿ ತೆಗೆದುಕೊಂಡ ಕಟ್ಟಡ ಮತ್ತು ಖಾಲಿ ನಿವೇಶನಗಳು ಇವುಗಳಿಗಾಗಿ ಕೊಡಲ್ಪಟ್ಟ್ಟ ಕಂರ್ಪೆನ್ಸೇಷ್ಣ ಮೊಬಲಗು ತೋರಿಸುವ ತಖ್ತೆ.

ಸೀರಿಯಲ್ ನಂಬರು.	ತಾಕು ನಂಬರು.	ಹಕ್ಕುದಾರನ ಹೆಸರು.	ತಾಕುಗಳ ಪಟ್ಟು ವಿಸ್ತೀರ್ಣ ಸಲಿಗೆಡ	ತರಹೆ.	ಕೊಡಲ್ಪಟ್ಟ ಕಂರ್ಪೆನ್ಸೇಷ್ಣ.											
					ಜಮೀನ್ ಕ್ರಯ.			ಕಟ್ಟಡದ ಕ್ರಯ.			ಇತರ ಲಾಗವಡು.			ಜುಮ್ಲಾ.		
1	1	ಹೇಮಾಶಾಮಯ್ಯ	1034	ಖಾಲಿ ನಿವೇಶನ	1034	0	0	0	0	0	166	0	0	1200	0	0
2	4	ಹೇಮಾಶಾಮಯ್ಯ	668	ಡಿಟೋ	668	0	0	0	0	0	100	0	0	768	0	0
3	6	ಮತ್ತು ತಿಪ್ಪಯ್ಯ ಮೇಸ್ತ್ರೀ ನಾರಣಪ್ಪ	791	ಪಕ್ಕಾ ಚತಾ	791	0	0	2775	0	0	834	0	0	4400	0	0
4	8	ಮಂಜೇಪಲ್ಲಿ ಶೀತಾರಾಮಯ್ಯ ಮತ್ತು ಎಲ್ಲಪ್ಪ	946	ಖಾಲಿ ನಿವೇಶನ	946	0	0	0	0	0	142	0	0	1088	0	0
5	11 & 12	ಮೇಸ್ತ್ರೀ ಮರಿಯಪ್ಪ	2148	ಪಕ್ಕಾ ಚತಾ	2148	0	0	2923	0	0	929	0	0	6000	0	0
6	15 & ½ of No. 23	ರಾಮಂಣನ ಮಗ ಲಿಂಗಂಣ	2365½	ಖಾಲಿ ನಿವೇಶನ	2365	8	0	0	0	0	355	0	0	2720	8	0
7	No. 16 & ½ of No. 23 & ½ of No. 19	ಎಂಗಣಕೆಪ್ಪ	3624⅜	ಡಿಟೋ	3624	6	0	0	0	0	554	0	0	4178	6	0
8	½ of No. 19	ನರಹರಿರಾವ್	798½	ಡಿಟೋ	798	8	0	0	0	0	121	8	0	920	0	0
9	20	ಪುಟ್ಟಣಂಣ	2006	ಪಕ್ಕಾ ಚತಾ	2006	0	0	5199	0	0	1545	0	0	8750	0	0
10	24	ಮುತ್ತಿನಕಂತೆ ಈ ಶ್ವರಸ್ವಾಮಿ	1928	ಕಲ್ಲಿನಿಂದ ಕಟ್ಟಿದಮಚ	1928	0	0	1143	0	0	929	0	0	4000	0	0
		ಜುಮ್ಲಾ	16309⅜		16309	6	0	12046	0	0	5675	8	0	34024	14	0

ವಿ. ಎ. ನರಸಿಂಹಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮಾ.

ತಾರೀಖು 2ನೇ ನವೆಂಬರ್ 1896ನೇ ಇಸವಿ.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ಕೋಲಾರ ಡಿಸ್ಟ್ರಿಕ್ಟು, ಚಿಕ್ಕಬಳ್ಳಾಪುರ ತಾಲ್ಲೂಕು, ನಂದೀ ಸ್ಟೇಟ್ ಫಾರೆ ಸ್ಟ್ಯನಲ್ಲಿ (ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರದ ರಸ್ತೆಗೆ ದಕ್ಷಿಣ ಪ್ರದೇಶದಲ್ಲಿರುವ) ಬಿದರುಗಳನ್ನು 1897ನೇ ಇಸವಿ ಜನವರಿ 1ನೇ ತಾರೀಖು ಲಾಗಾಯಿತು 1898ನೇ ಇಸವಿ ಜೂ ಆಖೈರುವರಿಗೂ ಅಂದರೆ 18 ತಿಂಗಳು ವರಿಗೂ ಕಡದು ಸಾಗಿಸಿಕೊಳ್ಳತಕ್ಕ ಹಕ್ಕು ದಾರಿಯು 1896ನೇ ಇಸವಿ ಡಿಸೆಂಬರು ತಿಂಗಳು 15ನೇ ತಾರೀಖು ಮಧ್ಯಾಹ್ನ 12 ಘಂಟೆ ಸಮಯದಲ್ಲಿ ನಂದೀಮೊಕ್ಕಾಂನಲ್ಲಿ ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ ಹರಾಜು ಮಾಡಲ್ಪಡುತ್ತೆ.

569

2. ಹರಾಜು ಫಾರೆಸ್ಟ್ಟು ಇಲಾಖಾ ಸ್ಸರ್ವೇಟರ್ ಸಾಹೇಬರವರ ಮುಂಜಾರಾತಿಗೆ ವಳಪಟ್ಟಿರುತ್ತೆ.

3. ಚಿಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನು ತೇವಣಿ ಕಟ್ಟತಕ್ಕದ್ದು. ಇದಕ್ಕೆ ತಪ್ಪಿದರೆ ಅವನನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುನರಾ ಹರಾಜು ಮಾಡಲ್ಪಡುವದು; ಆದರೆ, ಅದರಿಂದ ಉಂಟಾಗುವ ಆದಾಯದಲ್ಲಿ ಸದರೀ ಯವನಿಗೆ ಏನೂ ದೊರಿಯಲಾರದು. ಬಾಕಿ ಕೊಡಬೇಕಾದ ಮುಕ್ತಾಲು ಹಿಸ್ಸೆಯನ್ನು ಮೂರು ಸವ್ಕಿಸ್ತಿನಲ್ಲಿ ಅಂದರೆ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿಮಾಡತಕ್ಕದ್ದು. ಯಾವ ಕಿಸ್ತನ್ನಾಗಲಿ ವಾಯಿದೆಗೆ ಸರಿಯಾಗಿ ಪಾವತಿ ಮಾಡಲು ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಡುವದಲ್ಲದೆ, ಕಂಟ್ರಾಕ್ಟರು ಕತರಾವಣೆಮಾಡಿ ಜಮಾಯಿಸಿರುವ ಬಿದರುಗಳನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲಾಧೀತು. ಮತ್ತು ಇವನಿಂದ ಬರಬೇಕಾದ ಕಂಟ್ರಾಕ್ಟು ಹಣದ ಬಾಕಿಯನ್ನು ರೆವಿನ್ಯೂ ಕಂದಾಯದಂತೆ ಭಾವಿಸಿ ವಸೂಲ್ಮಾಡಲಾಧೀತು.

ಕಿಸ್ತುಗಳು.			ತಾರೀಖು.
I	..	..	1ನೇ ಮಾರ್ಚ್ 1897ನೇ ಇಸವಿ.
II	..	..	1ನೇ ಸೆಪ್ಟಂಬರ್ 1897ನೇ ಇಸವಿ.
III	..	..	5ನೇ ಜನವರಿ 1998ನೇ ಇಸವಿ.

4. ಹರಾಜು ಮುಂಜಾರ್ಮಾಡಲ್ಪಟ್ಟ ಸಂಗತಿಯನ್ನು ಕಂಟ್ರಾಕ್ಟರಿಗೆ ತಿಳಿಯಪಡಿಸಿದ ಕೂಡ್ಲೆ ಇವನು ಮೇಲ್ತಂಡ ಮತ್ತು ಈ ಕೆಳಗೆ ವಿವರಿಸಲ್ಪಟ್ಟ ಷರತ್ತುಗಳ ಕಂಡು ನಡದು ಕೊಳ್ಳತಕ್ಕಬಗ್ಗೆ ಛಾವಾ ಕಾಗದದಲ್ಲಿ ಬಂದು ಮುಚ್ಚಳಿಕೆಯನ್ನು ಬರದು ಕೊಡತಕ್ಕದ್ದು.

5. ಹರಾಜು ಮಾಡಲ್ಪಡುವ ಪ್ರದೇಶದಲ್ಲಿ ಇರುವ ಬಣ ಬಿದರುಗಳನ್ನೆಲ್ಲಾ ಕಂಟ್ರಾಕ್ಟರು ಕತರಾವಣೆ ಮಾಡಿ ಅಥವಾ ಜೇರು ಸಹಿತ ಕಿತ್ತು ಸಾಗಿಸಿಕೊಂಡು ಹೋಗಬಹುದು, ಆದರೆ ಹಸೀ ಬಿದರ ಗಳನ್ನು ಕಡಿಯುವದರಲ್ಲಿ ಪ್ರತಿ ಯೊಂದು ಪೊದೆಯಲ್ಲಿಯೂ ಎಂಟು ಹಸೀ ಬಿದರುಗಳನ್ನು ಬಿಟ್ಟು ಮಿಕ್ಕವುಗಳನ್ನು ಸಾಧ್ಯವಾದ ಮಟ್ಟಿಗೂ ಭೂ ಮಟ್ಟಕ್ಕೆ ಸರಿಯಾಗಿ ಕಡಿಯತಕ್ಕದ್ದು.

6. ಫಾರೆಸ್ಟ್ಟು ಇಲಾಖೆಯವರು ಮುಂಚಿತವಾಗಿ ಗುರ್ತು ಮಾಡಿಕೊಡುವ 100—200 ಎಕರೆ ವಿಸ್ತೀರ್ಣವುಳ್ಳ ಪ್ರತಿ ಯೊಂದು ಬ್ಲಾಕಿನಲ್ಲಿಯೂ ಬಂದು ಪ್ರದೇಶದಿಂದ ಪ್ರಾರಂಭಮಾಡಿ ಕ್ರಮವಾಗಿ ಕತರಾವಣೆಮಾಡಿಕೊಂಡು ಹೋಗಬೇಕೆ ಹೊರ್ತು ಯಾವ ಕಾರಣದಿಂದಲೇ ಯಾಗಲಿ ಜಂಗಲಿನ ಎಲ್ಲಾ ಪ್ರದೇಶದಲ್ಲಿಯೂ ಏಕಕಾಲದಲ್ಲಿ ಮನಸ್ವೀ ಕತರಾವಣೆ ಮಾಡಕೂಡದು.

7. ಕತರಾವಣೆ ಮಾಡಿದ ಪ್ರದೇಶದಿಂದ ಬಿದರುಗಳನ್ನು ರಫ್ತು ಮಾಡುವದಕ್ಕೆ ಮೊದಲೆ ಪ್ರತಿಯೊಂದು ಗಾಡಿಗೂ ಫಾರೆಸ್ಟ್ಟು ಇಲಾಖೆಯವರಿಂದ ಬಂದು ವೇ ಪರಮಿಟ್ ಪಡಿಯತಕ್ಕದ್ದು. ವೇ ಪರಮಿಟ್ ಇಲ್ಲದ ಭರ್ತಿಗಾಡಿಗಳನ್ನು ಫಾರೆಸ್ಟ್ಟು, ಪೋಲೀಸ್ ಅಥವಾ ರೆವಿನ್ಯೂ ನವುಕರರು ತಡೆ ಮಾಡಬಹುದು.

8. ಕಂಟ್ರಾಕ್ಟರಿಗೆ ಇಷ್ಟವಿದ್ದಲ್ಲಿ ವೊಣ ಬಿದರುಗಳಿಂದಲಾಗಲಿ ಅಥವಾ ಅವುಗಳ ಜೇರುಗಳಿಂದಲಾಗಲಿ ಮಳಿಗಾಲದಲ್ಲಿ ಇದ್ದಲು ಸುಡುವದಕ್ಕೆ ಅಪ್ಪಣೆ ಕೊಡಲಾಧೀತು.

9. ಪ್ರತಿಯೊಂದು ಬ್ಲಾಕಿನಲ್ಲಿಯೂ ಕತರಾವಣೆ ಮಾಡುವ ಬಿದರುಗಳನ್ನು ತಲೆಕೊಂಬೆ ಮತ್ತು ರಂಬೆಗಳನ್ನು ಸಹ ಮತ್ತೊಂದು ಬ್ಲಾಕು ಗುರ್ತು ಮಾಡಲ್ಪಡುವದಕ್ಕೆ ತತ್ಪೂರ್ವವೆ ಫಾರೆಸ್ಟ್ಟಿನಿಂದ ಹೊರಗೆ ಸಾಗಿಸತಕ್ಕದ್ದು. ತಪ್ಪಿದರೆ ಬಿಡಲ್ಪಟ್ಟ ಬಾಬನ್ನು ಸರ್ಕಾರದ ಛಾಯಿದೆ ಮೇಲೆ ನಿಗಾಮಿಟ್ಟು ಡಿಸ್ಟ್ರಿಕ್ಟು ಫಾರೆಸ್ಟ್ಟು ಆಫಿಸರವರಿಗೆ ಯುಕ್ತ ತೋರಿದ ರೀತಿಯಲ್ಲಿ ವಿಲೇವಾರಿ ಮಾಡಲು ಅವರು ಸ್ವತಂತ್ರರಾಗಿರುತ್ತಾರೆ.

ಬಿ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟು ಫಾರೆಸ್ಟ್ಟು ಆಫಿಸರ್.

ತುಮಕೂರು ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 28ನೇ ಅಕ್ಟೋಬರ್ 1896.

ಮೈಸೂರ ಗವರ್ಮೆಂಟ್ ತುಮಕೂರು ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರ್‌ಗಳು, ತಮ್ಮ ತಮ್ಮ ಸೇವಿಂಗ್ಸ್ ಬ್ಯಾಂಕ್ ಪ್ಯಾಸ್ ಬುಕ್ಕುಗಳನ್ನು 1895—96ನೇ ಇಸವಿಯ ಬಡ್ಡಿ ವೊಬಲಗನ್ನು ದಾಖಲ್ಮಾಡುವದಕ್ಕೋಸ್ಕರ ಈ ಆಫೀಸಿಗೆ ಕಳುಹಿಸಿ ಕೊಡಬೇಕಾಗಿ ಕೇಳಿಕೊಳ್ಳಲ್ಪಟ್ಟಿದೆ.

ಟಿ. ವಿಾರಕಮಾಲುರ್ಚ್ಯೆಅಲ್ಲಿಖಾರ್ಜುನ್,
ಟ್ರೆಜರಿ ಆಫಿಸರ್.

ಫಾರೆಸ್ಟ್ಟ ಡಿಪಾರ್ಟ್‌ಮೆಂಟ್.

ಸ್ ೯ 1896ನೇ ಇಸವಿ ನವೆಂಬರು ತಾರೀಖು 8ರಲ್ಲು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು, ಮದ್ದಗಿರಿ ಡಿಪೋಗಳಲ್ಲಿಯೂ, ಗುಬ್ಬಿ ತಾಲ್ಲೂಕು ಚನ್ನಕೆಟ್ಟಪಳ್ಳಿ ನಿಟಗುಂಟ ಪ್ಲಾಂಟೇಷ್ಣಗಳಲ್ಲಿಯೂ, ಕೆಳಗೆ ನಮೂದಿಸಿರತಕ್ಕ ತಾರೀಖಿನ ಮತ್ತು ಸ್ಥಳಗಳಲ್ಲಿ ಸಾಮಾನುಗಳನ್ನು ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ಟು ಆಫಿಸರವರಿಂದ ಹರಾಜ್ ಮಾಡಲ್ಪಡುತ್ತೆ.